**G and WC 3/2026**
**ಪಿ ಡಬ್ಲ್ಯೂಃ1**

**ದಿಃ 05.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ  ಅರ್ಜಿದಾರರ ಪರ ಶ್ರೀ. ಡಿ ಆರ್ ಜೆ  ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ಅಂತಿಮ ಡಿಕ್ರಿಯ ದೃಢೀಕೃತ ನಕಲನ್ನು ನಿಪಿ.1 ಎಂದು, 4 ಮ್ಯುಟೇಶನ್‌ಗಳನ್ನು ನಿಪಿ.2 ರಿಂದ 5 ಎಂದು, ನನ್ನ ಗಂಡನ ಮರಣ ಪ್ರಮಾಣ ಪತ್ರವನ್ನು ನಿಪಿ.6 ಎಂದು, ವಂಶವೃಕ್ಷವನ್ನು ನಿಪಿ.7 ಎಂದು, ನನ್ನ ಗಂಡನ ಆಧಾರ್ ಕಾರ್ಡನ್ನು ನಿಪಿ.8 ಎಂದು, ನನ್ನ ಆಧಾರ್ ಕಾರ್ಡನ್ನು ನಿಪಿ.9 ಎಂದು, 2 ನೇ ಅರ್ಜಿದಾರರ ಆಧಾರ್ ಕಾರ್ಡನ್ನು ನಿಪಿ.10 ಎಂದು, 2 ಪಹಣಿಗಳನ್ನು ನಿಪಿ.11 ಮತ್ತು 12 ಎಂದು, ನನ್ನ ಹೊರರೋಗಿ ಚೀಟಿಯನ್ನು ನಿಪಿ.13 ಎಂದು, ಲ್ಯಾಬ್ ವರದಿಯನ್ನು ನಿಪಿ.14 ಎಂದು, ಸಲಹಾ ಚೀಟಿಯನ್ನು ನಿಪಿ.15 ಎಂದು, ಇಸಿಜಿ ವರದಿಯನ್ನು ನಿಪಿ.16 ಎಂದು, ಡಾಃಯತೀಶ್‌ರವರು ನೀಡಿದ ಪ್ರಮಾಣ ಪತ್ರವನ್ನು ನಿಪಿ.17 ಎಂದು, ಬಿಡುಗಡೆ ಚೀಟಿಯನ್ನು ನಿಪಿ.18 ಎಂದು,  ಒಳರೋಗಿಯಾಗಿ ದಾಖಲಾದ ಬಗ್ಗೆ Cash Bill ನಿಪಿ.19 ಎಂದು, 3 ಹಣ ಪಾವತಿ ರಸೀದಿಗಳನ್ನು ನಿಪಿ.20 ರಿಂದ 22 ಎಂದು,  2 ನೇ ಅರ್ಜಿದಾರರ ಶಾಲಾ ದೃಢೀಕರಣ ಪತ್ರವನ್ನು ನಿಪಿ.23 ಎಂದು, ಪ್ರಜಾವಾಣಿ ಕನ್ನಡ ದಿನಪತ್ರಿಕೆಯ ದಿನಾಂಕ 31.01.2026 ರ ಪತ್ರಿಕಾ ಪ್ರಕಟಣೆಯನ್ನು ನಿಪಿ.24 ಎಂದು ಗುರುತಿಸಲಾಯಿತು.

ನನ್ನ ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ  ಎದುರುದಾರರು ಯಾರು ಇರುವುದಿಲ್ಲ.**

ಮರು ವಿಚಾರಣೆಃಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**G and WC 3/2026**

**ಪಿ ಡಬ್ಲ್ಯೂಃ1**